ಕೆ.ವಿ. ಶಿವಕುಮಾರ್, ಕಾಳೀಹುಂಡಿ
ನನ್ನವಳು ಇತ್ತೀಚೆಗೆ ಪತ್ತೇದಾರಿ ಸಾಹಿತ್ಯ ಹೆಚ್ಚು ಓದುತ್ತಿದ್ದಾಳಲ್ಲಾ..?

ನಿಮ್ಮ ಸುಳಿದಾರಿ ಪತ್ತೆ ಹಚ್ಚಲು ಅದೇ ಸರಿದಾರಿಯಂತೆ!

ಎಸ್.ಜಿ. ಕರನಂದಿ, ವಿದ್ಯಾನಗರ
ಮಾನ್ಯ ಅಣ್ಣಾ ಹಜಾರೆ ಹಾಗೂ ಮಣ್ಣಿನ ಮಗ ಗೌಡರು ಇವರಿಬ್ಬರ ವ್ಯತ್ಯಾಸವೇನು?
ಹಜಾರೆ ಟೋಪಿಯನ್ನು ತಮ್ಮ ತಲೆಗೇ ಹಾಕಿಕೊಳ್ಳುತ್ತಾರೆ!

ಎ.ಎಸ್. ಸ್ವಾಮಿ, ಶೋರಾಪುರ
ಸಿನಿಮಾ ನಟರಿಗೂ, ರಾಜಕೀಯಕ್ಕೂ ಎಂಥಾ ನಂಟು?
ಇಬ್ಬರಿಗೂ ರೀಲ್ ಬಿಡುವುದೇ ಮುಖ್ಯ!

ಎಂ.ಸಿ. ಅರುಣ್ ಕುಮಾರ್, ಮೈಸೂರು
ದೇವ-ದೇವತೆಗಳೆಲ್ಲಾ ಬೆಟ್ಟದಮೇಲೆಯೇ ಝಾಂಡಾ ಹೂಡುವುದೇಕೆ?

ತಮ್ಮದು ಹೈ ಲೆವೆಲ್ ಎಂದು ತೋರಿಸಿಕೊಳ್ಳಲು!

ಪಿ.ಜೆ. ರಾಘವೇಂದ್ರ, ಮೈಸೂರು
ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವ ಬದಲು ಬೆಕ್ಕನ್ನೇ ಕಟ್ಟಿಹಾಕಿದರೆ ಹೇಗೆ?
ಸಧ್ಯ! ಹೆಣ್ಣಿಗೆ ತಾಳಿ ಕಟ್ಟುವ ಬದಲು ಹೆಣ್ಣನ್ನೇ ಕಟ್ಟಿಹಾಕಿದರೆ ಎಂಬ ಯೋಚನೆ ಹೊಳೆದಿಲ್ಲವಲ್ಲ!

ಬಾಲುಸುತ, ಬೆಂಗಳೂರು
ಬೃಹತ್ ಬ್ರಹ್ಮಾಂಡ ಈಗೀಗ ಬಂಡಲ್ ಬ್ರಹ್ಮಾಂಡ ಆಗುತ್ತಿದೆಯಲ್ಲಾ...?
ಡಲ್ ಆಗದಿರಬೇಕೆಂದರೆ ಬಂಡಲ್ ಹೆಚ್ಚಿರಬೇಕಲ್ಲ!

ಜಾಕೋಬ್ ಡಿಸೋಜ, ಕುರುವಳ್ಳಿ
ಅಗ್ಗದ ವಸ್ತು ತರಬೇಕೆಂದಿರುವೆ, ಮಾರುಕಟ್ಟೆಯಲ್ಲಿ ಸಿಗಬಹುದೆ?
ಖಂಡಿತ; ಒಗ್ಗದ, ಕುಗ್ಗಿದ, ಮುಗ್ಗಿದ, ಜಗ್ಗಿದ, ಹಿಗ್ಗಿದ ವಸ್ತುಗಳು ಸಿಗುತ್ತವೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
ಒಂದು ಸುಳ್ಳನ್ನು ಹೇಳಲು ಹೋದರೆ ಸುಳ್ಳುಗಳ ಸರಮಾಲೆಯೇ ಸೃಷ್ಟಿಯಾಗುವುದಲ್ಲಾ..?
ಹೌದೇ? ಹಾಗಿದ್ದಲ್ಲಿ ನೀವು ವೃತ್ತಿಪರ ಸಾಕ್ಷಿದಾರರಾಗಿಬಿಡಿ, ಒಳ್ಳೆಯ ಸಂಪಾದನೆಯಾದೀತು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಭೂಗತಲೋಕಕ್ಕೂ, ಗುಪ್ತಲೋಕಕ್ಕೂ ಏನು ವ್ಯತ್ಯಾಸ?
ಮಂತ್ರಿಯಾಗುವ ಮುಂಚಿನದು ಭೂಗತಲೋಕ, ನಂತರದ್ದು ಗುಪ್ತಲೋಕ!

ಹಾಡ್ಯ ಜಯಾನಂದ, ಮೈಸೂರು
ಭೀಮನ ಅಮಾವಾಸ್ಯೆ ದಿನಕ್ಕೂ, ವ್ಯಾಲೆಂಟೈನ್ಸ್ ಡೇಗೂ ಏನು ವ್ಯತ್ಯಾಸ?
ಒಂದು ಬಲೆಗೆ ಬಿದ್ದವರಿಗೆ ಶ್ರೇಷ್ಠ, ಮತ್ತೊಂದು ಬಲೆ ಬೀಸುವವರಿಗೆ ಶ್ರೇಷ್ಠ.

ಹ.ಕೌ. ಅಪೂರ, ಬನ್ನೂರು
ತಾಳಿ ಕಟ್ಟುವವನು ಸರಿಯೋ, ಗುಲಾಬಿ ಕೊಟ್ಟವನು ಸರಿಯೋ?
ಇದೇ ಆಗಲಿ, ಅದೇ ಆಗಲಿ, ಯಾರು ಸರಿಯದೇ ಇರುವರೋ ಅವರೇ ಸರಿ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಜ್ಞಾನಿಗಳನ್ನು ಕಂಡರೆ ಕೈ ಮುಗಿಯಬೇಕು, ರಾಜಕೀಯ ನಾಯಕರನ್ನು ಕಂಡರೆ?
'ದೋಓಓಓಡ್‌ಡ್‌ಡ್‌ಡ್‌ಡ ನಮಸ್ಕಾರ' ಎಂದು ಕೈ ಮುಗಿಯಬೇಕು!

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕ್ರಿಕೆಟ್; ಇದರ ನಿಜವಾದ ಅರ್ಥ?
ವಿಕೆಟ್‌ಗಳ ನಡುವೆ ಕಾಲಹರಣ ಮಾಡುವ ವಿಕೆಡ್ ಆಟ!

ಸಾರಂಗ್, ಬೆಂಗಳೂರು
ವಕೀಲರು ಸುಳ್ಳು ಹೇಳುವುದೇಕೆ?
ಸುಳ್ಳನ್ನು ಸುಳ್ಳಿನಿಂದಲೇ ತೆಗೆಯಬೇಕೆಂಬ ಧ್ಯೇಯ!

ಬಹುಮಾನಿತ ಪ್ರಶ್ನೆ

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
ಮೊಟ್ಟೆಗಳೇಕೆ ಚೆಂಡಿನಂತೆ ಗೋಲಾಕಾರವಾಗಿಲ್ಲ?
ಕೋಳಿಗಳ ಹೊಟ್ಟೆಯಲ್ಲಿ ಕಾಂಪಾಸ್ ಇಲ್ಲದ್ದರಿಂದ!

ಲ್ಯಾಂಡ್ ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು
ಚಾಣಾಕ್ಷತೆಗೆ ನರಿ, ದ್ವೇಷಕ್ಕೆ ಹಾವು, ನಿಯತ್ತಿಗೆ ನಾಯಿ; ಮನುಷ್ಯ?
ತೋಳದ ಹಸಿವು, ಹೆಬ್ಬಾವಿನ ನಿದ್ರೆ, ಗಾಯಗೊಂಡ ಚಿರತೆಯ ಕ್ರೌರ್ಯದ ಸಾಕಾರ!

ಎನ್. ಪ್ರಕಾಶ್, ದೇವನಹಳ್ಳಿ
ಯಾವುದಕ್ಕೂ ಪ್ರತಿಕ್ರಿಯೆ ಕೊಡದೆ ಸುಮ್ಮನಿರುವವರ ಮನಸ್ಸನ್ನು ಅರಿಯುವುದು ಹೇಗೆ?
ವೆಟರ್ನರಿ ಡಾಕ್ಟರ್ ಮೂಲಕ ಪ್ರಯತ್ನಿಸಿ!

ರತ್ನಾ ಅಶೋಕ, ಗೊರವರ
ಗಂಡಿನ ಮುಂದೆ ಹೆಂಡ, ಹೆಂಡತಿ ಇಟ್ಟು ಒಂದು ಮಾತ್ರ ನಿನಗೆ ಎಂದರೆ ಯಾವುದನ್ನು ಆಯ್ದುಕೊಳ್ಳುತ್ತಾನೆ?
ಯಾರ ಹೆಂಡತಿಯನ್ನು ಇಟ್ಟು?

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
ಸೂರ್ಯಚಂದ್ರರೇ ದಿಢೀರನೆ ಇಲ್ಲವಾದರೆ ಜನರ ಗತಿ ಏನಾಗುತ್ತಿತ್ತು?
ಟ್ಯೂಬ್‌ಲೈಟ್‌ಗಳಂತಹವರಿಗೆ ಡಿಮ್ಯಾಂಡ್ ಹೆಚ್ಚುತ್ತಿತ್ತು!

ವಿ. ಹಮೀದ್, ವಿಟ್ಲ
ಲವ್ ಹುಟ್ಟಲು ಔಷಧಿ ಇದೆಯೆ?
ಇದೆಯಲ್ಲಾ! ಹೃದಯವಂತಿಕೆ ಎಂಬ ಔಷಧಿ ಇದ್ದರಾಯ್ತು; ಎಲ್ಲೆಡೆಯೂ ಲವ್ವೋ ಲವ್ವು!

ರವೀಂದ್ರನಾಥ ಪಿ. ಯಡಹಳ್ಳಿ, ಬೀಳಗಿ
ನ್ಯಾಯಪೀಠಕ್ಕೂ, ಬಲಿಪೀಠಕ್ಕೂ ಇರುವ ಅಂತರವೇನು?



ನ್ಯಾಯಾಲಯದಲ್ಲಿ ನ್ಯಾಯಪೀಠ, ನ್ಯಾಯಲಯವಾದಲ್ಲಿ ಬಲಿಪೀಠ!

ರಾಮ್